**ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ**
**ಮತ್ತು**
**ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಕನ್ನಡದಲ್ಲಿ ವಿಚಾರ ಸಂಕಿರಣ**

**ಶಾಲಾ ಶಿಕ್ಷಣದ ಪ್ರಸಕ್ತ ಸನ್ನಿವೇಶದಲ್ಲಿ ಶಿಕ್ಷಕರು**

## ಪರಿಕಲ್ಪನಾ–ಟಿಪ್ಪಣಿ

**ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ – ಕಿರು ಪರಿಚಯ:**

ಮೈಸೂರು ವಿಶ್ವವಿದ್ಯಾನಿಲಯವು 1916ರಲ್ಲಿ ಸ್ಥಾಪಿತವಾಗಿ ಈಗಾಗಲೇ ಶತಮಾನೋತ್ಸವವನ್ನು ಆಚರಿಸಿಕೊಂಡಿದೆ. ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗವು 1956ರಲ್ಲಿ ಆರಂಭಗೊಂಡು ಸದ್ಯದಲ್ಲಿ ಶಿಕ್ಷಣಶಾಸ್ತ್ರದಲ್ಲಿ ಸ್ನಾತಕೋತ್ತರ (M.Ed) ಪದವಿ ಕಾರ್ಯಕ್ರಮ ಮತ್ತು ಸಂಶೋಧನಾ (Ph.D ಪದವಿ ಮತ್ತು ಪೋಸ್ಟ್ ಡಾಕ್ಟೊರಲ್ ಪ್ರೋಗ್ರಾಂ) ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಈ ವಿಭಾಗದ ಹಿರಿಯ ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಸ್ಥಾನಗಳಲ್ಲಿದ್ದು ಗುರುತರ ಸೇವೆ ಸಲ್ಲಿಸಿರುತ್ತಾರೆ. ಜೊತೆಗೆ ವಿಭಾಗದ ಅಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಪ್ರಮುಖ ಸಂಶೋಧನಾ ಯೋಜನೆಗಳಲ್ಲಿ ನಿರತರಾಗಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಪ್ರಚಲಿತ ವಿಷಯಗಳ ಬಗೆಗೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟಗಳ ಅನೇಕ ಕಾರ್ಯಾಗಾರಗಳು, ಪರಿಚಯಾತ್ಮಕ ಕಾರ್ಯಕ್ರಮಗಳು, ಕೋರ್ಸ್‌ಗಳಿಗೆ ಸಂಬಂಧಿಸಿದ ಚಟುವಟಿಕೆಗಳು, ವಿಚಾರ ಸಂಕಿರಣಗಳು ಹಾಗೂ ಸಮ್ಮೇಳನಗಳನ್ನು ಈ ವಿಭಾಗವು ಆಯೋಜಿಸಿದೆ. ಶೈಕ್ಷಣಿಕ ವ್ಯವಸ್ಥೆಯನ್ನು ಉತ್ತಮಪಡಿಸಲು ಮತ್ತು ಸುಧಾರಣೆಗಳನ್ನು ತರಲು ಈ ವಿಭಾಗವು ಮಹತ್ತರ ಕೊಡುಗೆ ನೀಡಿದೆ.

**ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯ – ಕಿರು ಪರಿಚಯ:**

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯವು ಕರ್ನಾಟಕದ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯ ಅಧಿನಿಯಮ 2010ರ ಅಡಿಯಲ್ಲಿ ಯುಜಿಸಿ ಸೆಕ್ಷನ್ 2 ಎಫ್‌ರಂತೆ ಮಾನ್ಯತೆ ಪಡೆದು ಸ್ಥಾಪಿತವಾಗಿದೆ. ವಿಶ್ವವಿದ್ಯಾನಿಲಯವು ನಿರ್ದಿಷ್ಟವಾದ ಸಾಮಾಜಿಕ ಕಳಕಳಿಯನ್ನು ಹೊಂದಿದ್ದು ಯಾವುದೇ ಲಾಭಗಳಿಕೆಯ ಉದ್ದೇಶವಿಲ್ಲದ ಸಂಸ್ಥೆಯಾಗಿದೆ. ಶಿಕ್ಷಣದ ಮೂಲಕ ನ್ಯಾಯಯುತ, ಸಮಾನ, ಮಾನವೀಯ ಮತ್ತು ಸುಸ್ಥಿರ ಸಮಾಜ ನಿರ್ಮಾಣದ ಉದ್ದೇಶದಿಂದ ಈ ಸಂಸ್ಥೆಯು ಸ್ಥಾಪನೆಯಾಗಿದೆ. ಸಾಮಾಜಿಕ ಬದಲಾವಣೆ ಶಿಕ್ಷಣದಿಂದ ಸಾಧ್ಯ ಎಂಬ ಆಲೋಚನೆಗೆ ಸಂಸ್ಥೆಯು ಕಟಿಬದ್ಧವಾಗಿದ್ದು, ಈ ನಿಟ್ಟಿನಲ್ಲಿ ಕಾರ್ಯತತ್ಪರವಾಗಿದೆ.

ವಿಶ್ವವಿದ್ಯಾನಿಲಯವು ಈಗಾಗಲೇ ಶಿಕ್ಷಣ (Education), ಅಭಿವೃದ್ಧಿ (Development), ಸಾರ್ವಜನಿಕ ನೀತಿ ಮತ್ತು ಆಡಳಿತ (Public Policy & Governance) ಹಾಗೂ ಕಾನೂನು (Law) ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇವಲ್ಲದೆ ಮಾನವಿಕ ಶಾಸ್ತ್ರ (Humanities), ವಿಜ್ಞಾನ (Science) ಮತ್ತು ಸಮಾಜ ವಿಜ್ಞಾನ (Social Science) ವಿಷಯಗಳಲ್ಲಿ ಪದವಿ ಕಾರ್ಯಕ್ರಮಗಳನ್ನೂ ನಡೆಸುತ್ತಿದೆ.

Azim Premji University, Pixel Park, B Block, PES Campus, Electronics City, Hosur Road, Bengaluru 560100 Phone : 08066144900/01/02 – Fax 66145230

Azim Premji Foundation for Development, Registered Office: # 134, Doddakannelli, Next to Wipro Corporate Office, Sarjapur Road, Bengaluru 560 035, India
Phone : 91 80 66144900/01/02 CIN: U80301KA2009NPL051792 Website :www.azimpremjiuniversity.edu.in

ವಿಶ್ವವಿದ್ಯಾನಿಲಯದ ಮೂಲ ಸಂಸ್ಥೆಯಾದ ಅಜೀಂ ಪ್ರೇಮ್‌ಜಿ ಫೌಂಡೇಷನ್ ಕರ್ನಾಟಕದಲ್ಲಿ ಕಳೆದ ಹದಿನಾರು ವರ್ಷಗಳಿಂದ ತಳಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕದಲ್ಲಿ ಹತ್ತು ಜಿಲ್ಲಾ ಸಂಸ್ಥೆಗಳನ್ನು ಈಗಾಗಲೇ ಸ್ಥಾಪಿಸಲಾಗಿದ್ದು, ಗುಣಾತ್ಮಕ ಶಿಕ್ಷಣಕ್ಕಾಗಿ ಸರ್ಕಾರದೊಂದಿಗೆ ಕೈಜೋಡಿಸಿ ಕಾರ್ಯನಿರ್ವಹಿಸುತ್ತಿದೆ.

**ಕನ್ನಡದಲ್ಲಿ ವಿಚಾರ ಸಂಕಿರಣದ ಸಂದರ್ಭ:**

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯ ಪ್ರಸ್ತುತ ಶಾಲಾಶಿಕ್ಷಣ ಮತ್ತು ಸಂಬಂಧಿತ ಅಭಿವೃದ್ಧಿ ಕ್ಷೇತ್ರಗಳಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಈ ರೀತಿಯ ಕಾರ್ಯಕ್ರಮಗಳನ್ನು ಪ್ರಾದೇಶಿಕ ಭಾಷೆ ಮತ್ತು ಇತರ ಭಾರತೀಯ ಭಾಷೆಗಳಲ್ಲೂ ನಡೆಸಬೇಕಾದ ಅವಶ್ಯಕತೆ ಇದೆ. ಇದಕ್ಕಾಗಿ ವಿಮರ್ಶಾತ್ಮಕ ಚಿಂತನೆಯ ಮೂಲಕ ಸ್ಥಳೀಯ ಭಾರತೀಯ ಭಾಷೆಗಳಲ್ಲಿ ಜ್ಞಾನ ಭಂಡಾರವನ್ನು ಸೃಷ್ಟಿಸುವುದು ಬಹಳ ಮುಖ್ಯವಾಗುತ್ತದೆ. ತನ್ಮೂಲಕ ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಶೈಕ್ಷಣಿಕ ಸಾಹಿತ್ಯವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ಇತರ ಸಂಸ್ಥೆಗಳ ಸಹಯೋಗದೊಂದಿಗೆ ಉತ್ತಮ ಗುಣಮಟ್ಟದ ವಾಚನ ಸಾಮಗ್ರಿಗಳನ್ನು ಇಂಗ್ಲಿಷ್‌ನಿಂದ ಹಿಂದಿ ಮತ್ತು ಕನ್ನಡ ಭಾಷೆಗಳಿಗೆ ಅನುವಾದಿಸುವ ಕಾರ್ಯದಲ್ಲಿ ವಿಶ್ವವಿದ್ಯಾನಿಲಯ ಈಗಾಗಲೇ ಕಾರ್ಯನಿರತವಾಗಿದೆ. ಇದಕ್ಕೆ ಪೂರಕವಾಗಿ ಕನ್ನಡದಲ್ಲಿ ವಾರ್ಷಿಕ ವಿಚಾರ ಸಂಕಿರಣಗಳನ್ನು ಸಂಘಟಿಸಲು ಯೋಜಿಸಲಾಗಿದೆ. ಈ ವಾರ್ಷಿಕ ಸಂಕಿರಣಗಳ ಸರಣಿಯಲ್ಲಿ ಪ್ರಸ್ತುತ ಆಯೋಜಿಸುತ್ತಿರುವ ವಿಚಾರ ಸಂಕಿರಣವು ಮೊದಲನೆಯದಾಗಿದೆ.

ಈ ಮೊದಲು ತಿಳಿಸಿದಂತೆ, ಶೈಕ್ಷಣಿಕ ವಿಚಾರಗಳ ಬಗ್ಗೆ ವಿದ್ವತ್ಪೂರ್ಣ–ಸಂವಾದಗಳನ್ನು ಆಯೋಜಿಸುವುದು ಹಾಗು ಕನ್ನಡದಲ್ಲಿ ಬರವಣಿಗೆಯನ್ನು ಉತ್ತೇಜಿಸುವುದು ಈ ವಿಚಾರ ಸಂಕಿರಣದ ಉದ್ದೇಶವಾಗಿದೆ. ಈ ವಿಚಾರ ಸಂಕಿರಣದಲ್ಲಿ ಮಂಡಿಸಲಾಗುವ ಲೇಖನಗಳು ಮತ್ತು ಅವುಗಳ ಬಗ್ಗೆ ನಡೆಯುವ ಚರ್ಚೆಗಳು ಉತ್ತಮ ಗುಣಮಟ್ಟದ ಶೈಕ್ಷಣಿಕ ಸಾಹಿತ್ಯವನ್ನು ಸಾಕಷ್ಟು ಪ್ರಮಾಣದಲ್ಲಿ ಬೆಳೆಸುವ ನಿರೀಕ್ಷೆ ಇದೆ. ಈ ಲೇಖನಗಳನ್ನು ಒಟ್ಟುಗೂಡಿಸಿ ವಿಚಾರ ಸಂಕಿರಣದ ಮುಖ್ಯ ವಿಚಾರಗಳ ಬಗ್ಗೆ ಒಂದು ಸಂಗ್ರಹ ಗ್ರಂಥವನ್ನು (Compendium) ಹೊರತರಲಾಗುವುದು. ಈ ರೀತಿಯ ಗ್ರಂಥಗಳು ಶಿಕ್ಷಣ ಕ್ಷೇತ್ರದಲ್ಲಿ ಕನ್ನಡದಲ್ಲಿ ಗುಣಮಟ್ಟದ ಸಂಪನ್ಮೂಲ ಸಾಮಗ್ರಿಗಳಾಗುತ್ತವೆ. ಇದಲ್ಲದೆ, ಈ ವಿಚಾರ ಸಂಕಿರಣವು ಶಿಕ್ಷಣಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಎಲ್ಲರೂ ಒಟ್ಟಾಗಿ ಚರ್ಚಿಸಲು ವೇದಿಕೆಯನ್ನು ಒದಗಿಸುವ ಮೂಲಕ ವಿಷಯಾಧಾರಿತ ಸಂವಾದದಲ್ಲಿ ತೊಡಗಲು ಸೂಕ್ತ ವಾತಾವರಣವನ್ನು ಕಲ್ಪಿಸುತ್ತದೆ. ಶಾಲೆಗಳೊಂದಿಗೆ ನೇರವಾಗಿ ಕಾರ್ಯ ನಿರ್ವಹಿಸುತ್ತಿರುವ ಅಥವಾ ಶಾಲೆಗಳಲ್ಲಿಯೇ ಕೆಲಸ ಮಾಡುತ್ತಿರುವ ವ್ಯಕ್ತಿಗಳ ಚಿಂತನಶೀಲ ಅನಿಸಿಕೆಗಳನ್ನು ಚರ್ಚಿಸಲು ಹಾಗು ಪಸರಿಸಲು ಅವಕಾಶವನ್ನು ಕಲ್ಪಿಸುತ್ತದೆ.

**ವಿಷಯದ ಔಚಿತ್ಯ:**

ಕಳೆದ ದಶಕದಲ್ಲಿ ಶೈಕ್ಷಣಿಕ ನೀತಿಗಳಲ್ಲಿ ಮಹತ್ವಪೂರ್ಣ ಬದಲಾವಣೆಗಳಾಗಿವೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005), ಶಿಕ್ಷಣದ ಹಕ್ಕು ಕಾಯ್ದೆ (2009), ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009) ಈ ಅವಧಿಯಲ್ಲಿ ಹೊರಬಂದಿರುವ ಮಹತ್ವದ ನೀತಿ–ನಿರೂಪಣಾ ದಾಖಲೆಗಳಾಗಿವೆ. ಸಮಾನತೆಯನ್ನು ಸಾಧಿಸುವುದರೊಂದಿಗೆ ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಈ ಎಲ್ಲಾ ನೀತಿಗಳು ಒತ್ತು ನೀಡಿರುವುದರಿಂದ ಇಂದಿನ ಶಾಲಾ ವ್ಯವಸ್ಥೆಯು ಹೆಚ್ಚು ಸಂಕೀರ್ಣವಾಗಿದೆ. ಶಿಕ್ಷಕರ ಬಗ್ಗೆ ಸಮಾಜದ ನಿರೀಕ್ಷೆಗಳು ನಿರಂತರವಾಗಿ ಬದಲಾವಣೆ ಹೊಂದುತ್ತಿದ್ದು ಅವು ಬಹುಮುಖಿಯಾಗುತ್ತಿವೆ. ಈ ಸಂದರ್ಭದಲ್ಲಿ ಶಿಕ್ಷಕರು ತಮ್ಮ ಬಗ್ಗೆ ಹೊಂದಿರುವ ದೃಷ್ಟಿಕೋನ ಹಾಗೂ ಸಮಾಜದ ನಿರೀಕ್ಷೆಗಳು ಶಿಕ್ಷಕರ ಸ್ವಾಯುತ್ತತೆಯನ್ನು ಮುನ್ನೆಲೆಗೆ ತರುತ್ತವೆ. ಈ ಎಲ್ಲಾ ನೀತಿಗಳು ವಿದ್ಯಾರ್ಥಿ ಕೇಂದ್ರಿತವಾಗಿದ್ದರೂ ಕೂಡಾ ಶಿಕ್ಷಕರ ಪಾತ್ರ ನಿರ್ಣಾಯಕವಾಗಿ ಮುಂದುವರೆದಿದೆ. ಆದರೂ, ಶಿಕ್ಷಕರು ಮತ್ತು ಬದಲಾಗುತ್ತಿರುವ ಅವರ ಪಾತ್ರಕ್ಕೆ ಸಂಬಂಧಿಸಿದ ವಿಷಯಗಳ ಬಗೆಗಿನ ಸಂಶೋಧನೆಗಳು ಮತ್ತು ಸಂವಾದಗಳು ಬಹಳ ಕಡಿಮೆ.

ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಕನ್ನಡ ವಿಚಾರ ಸಂಕಿರಣಗಳ ಸರಣಿಯ ಮೊದಲನೇ ವಿಚಾರ ಸಂಕಿರಣಕ್ಕೆ ನಾವು 'ಶಾಲಾಶಿಕ್ಷಣದ ಪ್ರಸಕ್ತ ಸನ್ನಿವೇಶದಲ್ಲಿ ಶಿಕ್ಷಕರು' ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇವೆ.

ಈ ವಿಚಾರ ಸಂಕಿರಣವನ್ನು 2018ರ ಏಪ್ರಿಲ್ ತಿಂಗಳ 16, 17 ಮತ್ತು 18ರಂದು ಈ ಕೆಳಗಿನ ಮುಖ್ಯ ವಿಷಯಗಳು ಮತ್ತು ಉಪ-ವಿಷಯಗಳ ಬಗ್ಗೆ ಆಯೋಜಿಸಲಾಗುತ್ತಿದೆ. ಈ ಕೆಳಗೆ ನೀಡಲಾಗಿರುವ ಪ್ರಶ್ನೆಗಳ ಜೊತೆಗೆ ಇನ್ನಿತರ ಸಂಬಂಧಿತ ವಿಷಯಗಳ ಕುರಿತು ಈ ವಿಚಾರ ಸಂಕಿರಣದಲ್ಲಿ ಗುಣಮಟ್ಟದ ಚರ್ಚೆಗಳಾಗುತ್ತವೆ ಎಂದು ಆಶಿಸಲಾಗಿದೆ.

**ಮುಖ್ಯ ವಿಷಯ: ಶಾಲಾ ಶಿಕ್ಷಣದ ಪ್ರಸಕ್ತ ಸನ್ನಿವೇಶದಲ್ಲಿ ಶಿಕ್ಷಕರು:**

**ಉಪ-ವಿಷಯ-1 – ಶಿಕ್ಷಕರ ವೃತ್ತಿಪರ ಬೆಳವಣಿಗೆ**

ಶಿಕ್ಷಕರ ವೃತ್ತಿಪರ ಬೆಳವಣಿಗೆಯು ಶಿಕ್ಷಕರ ಸೇವಾಪೂರ್ವ ಹಾಗೂ ಸೇವಾನಿರತ ಅವಧಿಗಳಲ್ಲಿ ನಿರಂತರ ಕಲಿಕೆಯನ್ನು ಒಳಗೊಂಡಿರುತ್ತದೆ. ಕಳೆದ ಎರಡು ದಶಕಗಳಲ್ಲಿ ಶಿಕ್ಷಕರ ಸೇವಾ ಪೂರ್ವ ಸಿದ್ಧತೆಯ ಕ್ಷೇತ್ರದಲ್ಲಿ ಮಹತ್ವಪೂರ್ಣ ಸುಧಾರಣೆಗಳಾಗಿವೆ. ಮುಖ್ಯವಾಗಿ ಸಮಾಜದ ಬೇಡಿಕೆಗಳಿಗೆ, ಬದಲಾಗುತ್ತಿರುವ ಶಾಲಾ ಶಿಕ್ಷಣದ ಸನ್ನಿವೇಶಕ್ಕೆ, ಶಿಕ್ಷಕರ ವೃತ್ತಿಪರ ಆಚರಣೆಯಲ್ಲಿ ಬೆಳೆಯುತ್ತಿರುವ ಸಂಕೀರ್ಣತೆಗಳಿಗೆ ಅನುಗುಣವಾಗಿ ಮತ್ತು ಈ ಕ್ಷೇತ್ರದಲ್ಲಿ ನಡೆಸಲಾಗಿರುವ ಸಂಶೋಧನೆಗಳಿಂದ ಪಡೆದ ಒಳನೋಟಗಳಿಗೆ ಪ್ರತಿಕ್ರಿಯೆಗಳೆಂಬಂತೆ ಈ ಸುಧಾರಣೆಗಳಾಗಿವೆ. ಇದಕ್ಕೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳನ್ನು ಚರ್ಚಿಸಬೇಕಾಗಿದ್ದು ಅವುಗಳಲ್ಲಿ ಕೆಲವನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

ಬದಲಾಗುತ್ತಿರುವ ಸಾಮಾಜಿಕ ಅಗತ್ಯತೆಗಳನ್ನು ಪೂರೈಸಲು ಭವಿಷ್ಯದ ಶಿಕ್ಷಕರನ್ನು ಹೇಗೆ ಸಿದ್ಧಪಡಿಸಲಾಗುತ್ತಿದೆ? ಶಿಕ್ಷಕರ ಅಗತ್ಯಗಳಿಗೆ ಸೇವಾಪೂರ್ವ ಶಿಕ್ಷಕ ಶಿಕ್ಷಣ (Pre-service Teacher Education - PSTE) ಸಂಸ್ಥೆಗಳು ಹೇಗೆ ಸ್ಪಂದಿಸುತ್ತಿವೆ? ಶಿಕ್ಷಕ ಶಿಕ್ಷಣ ಸಂಸ್ಥೆಗಳು ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು (National Curriculum Framework for Teacher Education – NCFTE) ಹೇಗೆ ಅಳವಡಿಸಿಕೊಂಡಿವೆ? 2014ರ ನಂತರದ ಶಿಕ್ಷಕ ಶಿಕ್ಷಣ ಕಾರ್ಯಕ್ರಮದ ಅವಧಿಯನ್ನು ವಿಸ್ತಾರಗೊಳಿಸಿದ ಹಾಗು ಇತರ ಸುಧಾರಣೆಗಳನ್ನೊಳಗೊಂಡ ಸನ್ನಿವೇಶದಲ್ಲಿ ಶಿಕ್ಷಕ ಶಿಕ್ಷಣ ಸಂಸ್ಥೆಗಳ ಸ್ಥಿತಿಗತಿ ಏನು? ಇಂದಿನ ಸೇವಾನಿರತ ಶಿಕ್ಷಕರ ಅಭಿವೃದ್ಧಿ ಕಾರ್ಯಕ್ರಮಗಳ ಸ್ವರೂಪವೇನು? ನಿರಂತರ ಶಿಕ್ಷಕ ಅಭಿವೃದ್ಧಿಯ ಸವಾಲು ಮತ್ತು ಅವಕಾಶಗಳಾವುವು? ತಮ್ಮ ವೃತ್ತಿ ಬೆಳವಣಿಗೆ ಬಗ್ಗೆ ಶಿಕ್ಷಕರ ಅಭಿಪ್ರಾಯಗಳೇನು? ಸೇವಾನಿರತ ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಕಲ್ಪಿಸಬಹುದಾದ ಮತ್ತು ಕಾರ್ಯರೂಪಕ್ಕೆ ತರಬಹುದಾದ ಪರ್ಯಾಯ ಮಾರ್ಗಗಳಾವುವು?

**ಉಪ-ವಿಷಯ-2 – ಶಿಕ್ಷಕರ ಆಚರಣೆಗಳು**

ನೀತಿ ನಿರೂಪಣೆಗಳು ಒಂದು ನೆಲೆಯಲ್ಲಿ ಬೋಧನಾ-ಕಲಿಕೆಯ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯನ್ನು ಕೇಂದ್ರವಾಗಿ ಪರಿಭಾವಿಸುತ್ತವೆ ಹಾಗೂ ಇನ್ನೊಂದು ನೆಲೆಯಲ್ಲಿ ಸಮುದಾಯ ಸಂಬಂಧಿತ ಅಸ್ತಿತ್ವವನ್ನು ಶಾಲೆ ಪರಿಭಾವಿಸಿಕೊಳ್ಳಲು ಮಹತ್ವ ನೀಡುತ್ತವೆ. ಇದರಿಂದಾಗಿ ಶಿಕ್ಷಕರು ಮಕ್ಕಳ ಕಲಿಕೆಯಲ್ಲಿ ಸುಗಮಕಾರರಾಗಿ ಕಾರ್ಯನಿರ್ವಹಿಸಬೇಕಲ್ಲದೆ ಶಾಲೆ ಹಾಗೂ ಸಮುದಾಯದ ನಡುವಣ ಪ್ರಮುಖ ಕೊಂಡಿಯಾಗಿ ಕೂಡಾ ಕಾರ್ಯನಿರ್ವಹಿಸಬೇಕಾಗುತ್ತದೆ. ಇಂಥ ಬಹುಮುಖಿ ಪಾತ್ರಗಳ ಸವಾಲುಗಳನ್ನು ಎದುರಿಸಲು ಶಿಕ್ಷಕರು ತಮ್ಮ ಕಾರ್ಯನಿರ್ವಹಣೆಯಲ್ಲಿ ಹೇಗೆ ಬದಲಾವಣೆಗಳನ್ನು ತಂದುಕೊಂಡಿದ್ದಾರೆ ಎಂಬುದನ್ನು ಅರಿಯುವುದು ಮುಖ್ಯವಾಗುತ್ತದೆ. ಈ ಕೆಳಗಿನ ಕೆಲವು ಪ್ರಶ್ನೆಗಳು ಈ ನಿಟ್ಟಿನಲ್ಲಿ ಗಮನಾರ್ಹವಾಗಬಹುದು.

ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಶಿಕ್ಷಕರ ಅನುಭವಗಳಾವುವು? ಶಿಕ್ಷಕರು ತರಗತಿಗಳ ಒಳಗೆ ಮತ್ತು ಹೊರಗೆ ತಮಗೆದುರಾಗುವ ಸವಾಲುಗಳನ್ನು ಹೇಗೆ ಪರಿಹರಿಸಿಕೊಳ್ಳುತ್ತಾರೆ? ಶಿಕ್ಷಕರು ಸಮುದಾಯದೊಂದಿಗೆ ಹೇಗೆ ತೊಡಗಿಸಿಕೊಳ್ಳುತ್ತಾರೆ? ಇಂದಿನ ಬದಲಾದ ಶಾಲಾ ಸನ್ನಿವೇಶದಲ್ಲಿ ಶಿಕ್ಷಕರು ತಮ್ಮ ಆಚರಣೆಗಳ ಬಗ್ಗೆ ವಿಮರ್ಶಿಸಿಕೊಳ್ಳಲು ಯಾವಾವ ಅವಕಾಶಗಳಿವೆ? ಶಿಕ್ಷಕರಿಗೆ ಇತ್ತೀಚಿನ ನೀತಿಗಳು (ಧೋರಣೆಗಳು), ಸುಧಾರಣೆಗಳು ಒದಗಿಸಿರುವ ಅವಕಾಶಗಳು ಮತ್ತು ಒಡ್ಡಿರುವ ಸವಾಲುಗಳಾವುವು ಹಾಗು ಅವುಗಳಿಗೆ ಶಿಕ್ಷಕರ ಪ್ರತಿಕ್ರಿಯೆಗಳಾವುವು? ಶಿಕ್ಷಕರು ತಮ್ಮ ಬಹು–ಪಾತ್ರಗಳ ನಿರ್ವಹಣೆಯನ್ನು ಹೇಗೆ ಸಮತೋಲನಗೊಳಿಸುವರು?

**ಉಪ–ವಿಷಯ–3 –ಶಿಕ್ಷಕರ ಅಸ್ಮಿತೆ (Teacher Identity)**

ಶಿಕ್ಷಕರ ಅಸ್ಮಿತೆ ಅವರ ವೃತ್ತಿಪರ ಆಚರಣೆಯಲ್ಲಿ ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತದೆ. ಈ ಅಸ್ಮಿತೆ ಬದಲಾಗುವ ಸಮಯಕ್ಕೆ ಅನುಗುಣವಾಗಿ ವಿಕಾಸಗೊಳ್ಳುವುದರಿಂದ ಅದು ಸ್ಥಾಯಿಯಾಗಿರುವುದಿಲ್ಲ. ಶಿಕ್ಷಕರ ಅಸ್ಮಿತೆ ರೂಪುಗೊಳ್ಳುವುದರಲ್ಲಿ ಅನೇಕ ಅಂಶಗಳು ಪ್ರಭಾವ ಬೀರುತ್ತವೆ. ಶಿಕ್ಷಕರು ತಮ್ಮನ್ನು ತಾವು ಹೇಗೆ ನೋಡುತ್ತಾರೆ? ಅವರು ತಮ್ಮ ಬಗ್ಗೆ ಇತರರ ದೃಷ್ಟಿಕೋನಗಳಿಗೆ ಅನುಗುಣವಾಗಿ ಹೇಗೆ ವಿಮರ್ಶಿಸಿಕೊಳ್ಳುತ್ತಾರೆ? ಎಂಬ ಅರಿವನ್ನು ಮೂಡಿಸಿಕೊಳ್ಳುವುದು ಮುಖ್ಯವಾಗುತ್ತದೆ. ಈ ಅಂಶಗಳನ್ನು ಪ್ರತಿನಿಧಿಸುವ ಈ ಕೆಳಗಿನ ಪ್ರಶ್ನೆಗಳಿಗೆ ದೊರಕುವ ಪ್ರತಿಕ್ರಿಯೆಗಳು ಸಹಾಯಕವಾಗಬಲ್ಲವು.

ಶಿಕ್ಷಕರ ಅಸ್ಮಿತೆ ಮತ್ತು ಬದಲಾದ ಸಂದರ್ಭದಲ್ಲಿ ಶಿಕ್ಷಕರ ಮೇಲೆ ಪ್ರಭಾವ ಬೀರುವ ವಿವಿಧ ಅಂಶಗಳನ್ನು ಹೇಗೆ ಅರ್ಥೈಸಿಕೊಳ್ಳಲಾಗಿದೆ? ಶಾಸನಾತ್ಮಕ ಮತ್ತು ಸಾಂಸ್ಥಿಕ ಬದಲಾವಣೆಗಳು ಶಿಕ್ಷಕರಿಗೆ ಒಂದು ಹೊಸ ಅಸ್ಮಿತೆಯನ್ನು ಸೃಷ್ಟಿಸಿವೆಯೇ? ತಮ್ಮ ವೈಯಕ್ತಿಕ ಅಸ್ಮಿತೆಗಳಲ್ಲದೆ ಶಿಕ್ಷಕರು ಹೊಂದಿರುವ ವೃತ್ತಿಪರ ಅಸ್ಮಿತೆ ಎಂಥದು? ಶಾಲಾ ಶಿಕ್ಷಣದ ಯಾವ ಅಂಶಗಳು ಶಿಕ್ಷಕರ ವೃತ್ತಿಪರ ಅಸ್ಮಿತೆ ರೂಪುಗೊಳ್ಳಲು ಸಹಾಯಕವಾಗುತ್ತವೆ ಮತ್ತು ಯಾವ ಅಂಶಗಳು ಆ ಅಸ್ಮಿತೆಯನ್ನು ಕುಂಠಿತಗೊಳಿಸುತ್ತವೆ? ಶಿಕ್ಷಕರು ತಮ್ಮನ್ನು ತಾವು ಹೇಗೆ ನೋಡುತ್ತಾರೆ? ಮತ್ತು ಶಾಲೆ ಮತ್ತು ಸಮುದಾಯದವರು ಅವರನ್ನು ಹೇಗೆ ನೋಡುತ್ತಾರೆ?

**ಮುಖ್ಯ ದಿನಾಂಕಗಳು ಮತ್ತು ಸ್ಥಳ:**

ಮೂರು ದಿನಗಳ ಈ ವಿಚಾರ ಸಂಕಿರಣವನ್ನು 2018ರ ಏಪ್ರಿಲ್ ತಿಂಗಳ 16, 17, 18ರಂದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆಸಲು ಯೋಜಿಸಲಾಗಿದೆ.

**ಸಹಭಾಗಿಗಳು ಮತ್ತು ಅವರಿಂದ ನಿರೀಕ್ಷೆಗಳು:**

ವಿಚಾರ ಸಂಕಿರಣದ ಮುಖ್ಯ ವಿಷಯಕ್ಕೆ ಸಂಬಂಧಿಸಿದಂತೆ ಯಾವುದಾದರೊಂದು ಉಪವಿಷಯದ ಬಗ್ಗೆ ಈ ಕೆಳಗಿನ ಸಹಭಾಗಿ ಸಮೂಹಗಳಿಂದ ಲೇಖನಗಳನ್ನು ಆಹ್ವಾನಿಸಲಾಗಿದೆ:

- ಶಿಕ್ಷಕರು
- ಶಿಕ್ಷಕ ಪ್ರಶಿಕ್ಷಕರು (ಶಿಕ್ಷಕ ಪ್ರಶಿಕ್ಷಣ ಸಂಸ್ಥೆಗಳ ಅಧ್ಯಾಪಕ ವೃಂದ)
- ಶಿಕ್ಷಣಶಾಸ್ತ್ರದ ಸಂಶೋಧಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು
- ವಿಶ್ವವಿದ್ಯಾನಿಲಯಗಳ ಅಧ್ಯಾಪಕ ವೃಂದ
- ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಘಟನೆಗಳ ಸದಸ್ಯರು

ಸಹಭಾಗಿಗಳು ಪರಿಕಲ್ಪನಾತ್ಮಕ ಅಥವಾ ಕ್ಷೇತ್ರ ಅನುಭವ ಆಧಾರಿತ ಲೇಖನಗಳನ್ನು ಕನ್ನಡದಲ್ಲಿ ಮಾತ್ರ ಬರೆಯಬೇಕು. ಕ್ಷೇತ್ರ ಅನುಭವ ಆಧಾರಿತ ಲೇಖನಗಳು ಕ್ಷೇತ್ರ ಅನುಭವಗಳನ್ನು ಅಥವಾ ಕ್ಷೇತ್ರ ದತ್ತಾಂಶಗಳನ್ನು ಅವಲಂಬಿಸಿರಬೇಕು.

ಲೇಖನಗಳನ್ನು ಎರಡು ವಿಧಗಳಲ್ಲಿ ಬರೆಯಬಹುದು.

- 1200 ರಿಂದ 1500 ಪದಗಳ ಮಿತಿಯ ಲಘು ಲೇಖನ
- 2500 ರಿಂದ 5000 ಪದಗಳ ಮಿತಿಯ ದೀರ್ಘ ಲೇಖನ

**ಲೇಖನಗಳ ಸಾರಾಂಶದ (Abstract) ಸಲ್ಲಿಕೆ:**

ಲಘು ಲೇಖನಗಳಿಗೆ 400–600 ಪದಗಳ ಮಿತಿಯಲ್ಲಿ ಮತ್ತು ದೀರ್ಘ ಲೇಖನಗಳಿಗೆ 800–1000 ಪದಗಳ ಮಿತಿಯಲ್ಲಿ ಲೇಖನದ ಸಾರಾಂಶವನ್ನು (**Abstract**) ಮೊದಲಿಗೆ ಕಳುಹಿಸಬೇಕು.

**ಲೇಖನಗಳ ಸಾರಾಂಶವು ಆಯ್ಕೆ ವಿಷಯಕ್ಕೆ ಸಂಬಂಧಿಸಿದ ಈ ಕೆಳಗಿನ ಅಂಶಗಳನ್ನು ಸ್ಥೂಲವಾಗಿ ಹೊಂದಿರಬೇಕು:**

- ಒಟ್ಟಾರೆ ಲೇಖನದ ಔಚಿತ್ಯತೆ
- ಅಧ್ಯಯನ/ಲೇಖನದ ಉದ್ದೇಶಗಳು
- ಅಧ್ಯಯನಕ್ಕೆ ಬಳಸಿದ (ಕ್ಷೇತ್ರ ಅನುಭವ ಆಧಾರಿತ ಲೇಖನಗಳಿಗೆ) ವಿಧಾನಗಳು
- ವಿಶ್ಲೇಷಣಾತ್ಮಕ ಅಥವಾ ಪ್ರಮುಖ ವಾದ ಮಂಡನೆಯ ಹರಿವು
- ಲೇಖನದಿಂದ ಹೊರಹೊಮ್ಮುವ ಫಲಿತಗಳು/ಒಳನೋಟಗಳು

**ಲೇಖನದ ಸಾರಾಂಶ ಸಲ್ಲಿಕೆಗೆ ಕಡೆಯ ದಿನಾಂಕ:** 4 ಅಕ್ಟೋಬರ್ 2017

**ಸಾರಾಂಶ ಪರಿಶೀಲನೆ:** 03 ನವೆಂಬರ್ 2017

**ಪೂರ್ಣ ಲೇಖನ ಸಲ್ಲಿಕೆ:** 10 ಫೆಬ್ರವರಿ 2018

**ಸಾರಾಂಶ ಕಳುಹಿಸಬೇಕಾದ ಇ–ಮೇಲ್ ವಿಳಾಸ:** kannadaseminar@apu.edu.in

**ಸಂಗ್ರಹ ಗ್ರಂಥ (Compendium):** ವಿಚಾರ ಸಂಕಿರಣದಲ್ಲಿ ಪ್ರಸ್ತುತಪಡಿಸಲಾಗುವ ಲೇಖನಗಳನ್ನು ಒಟ್ಟುಗೂಡಿಸಿ ಒಂದು ಸಂಗ್ರಹ ಗ್ರಂಥವಾಗಿ ಪ್ರಕಟಿಸಲಾಗುವುದು.